# ಕೆಜಿಟಿಟಿಐ ಕಲಬುರಗಿ ಕೇಂದ್ರಕ್ಕೆ ವಾಚ್ ಮ್ಯಾನ್, ಹೌಸ್‌ಕೀಪಿಂಗ್, ವಾಹನ ಚಾಲಕ ಹಾಸ್ಟೆಲ್ ವಾರ್ಡನ್ ಮತ್ತು ಹಾಸ್ಟೆಲ್ ಅಟೆಂಡರ್ ಹೊರಗುತ್ತಿಗೆ ಸೇವೆ ಒದಗಿಸುವ ಬಗ್ಗೆ

**ಸಂಖ್ಯೆ:** KGT/PUR/KLB/SECURITY/05/2025-26 ದಿನಾಂಕ: 15/07/2025

## ಟೆಂಡರ್ ಅಧಿಸೂಚನೆ

**ವಿಷಯ:** ಕೆಜಿಟಿಟಿಐ ಕಲಬುರಗಿ ಕೇಂದ್ರಕ್ಕೆ ವಾಚ್ ಮ್ಯಾನ್, ಹೌಸ್ ಕೀಪಿಂಗ್, ವಾಹನ ಚಾಲಕ, ಹಾಸ್ಟೆಲ್ ವಾರ್ಡನ್ ಮತ್ತು ಹಾಸ್ಟೆಲ್ ಅಟೆಂಡರ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಮಾನವ ಸಂಪನ್ಮೂಲ ಹೊರಗುತ್ತಿಗೆ ಸೇವಾದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುವ ಬಗ್ಗೆ.

***

ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ (ಕೆಜಿಎಂಎಸ್‌ಡಿಸಿ) ಸೊಸೈಟಿಯು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟು ಒಂದು ಸ್ವಾಯತ್ತ ಸಂಸ್ಥೆಯಾಗಿ ನೋಂದಾಯಿಸಲ್ಪಟ್ಟಿದೆ. ಈ ಸೊಸೈಟಿಯು M/s GIZ-InS ಜರ್ಮನಿಯ ತಾಂತ್ರಿಕ ಸಹಯೋಗದೊಂದಿಗೆ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ (ಕೆ.ಜಿ.ಟಿ.ಟಿ.ಐ) ಕೇಂದ್ರವನ್ನು ಕಲಬುರಗಿಯಲ್ಲಿ ಸ್ಥಾಪಿಸಿದೆ. ಕೇಂದ್ರಕ್ಕೆ ವಾಚ್ ಮ್ಯಾನ್ -03, ಹೌಸ್ ಕೀಪಿಂಗ್-05, ವಾಹನ ಚಾಲಕ-01, ಹಾಸ್ಟೆಲ್ ವಾರ್ಡನ್-01 ಮತ್ತು ಹಾಸ್ಟೆಲ್ ಅಟೆಂಡರ್-01 ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಸಂಬಂಧ ಆಸಕ್ತ ಟೆಂಡರ್‌ದಾರರಿ0ದ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ-1999 ರನ್ವಯ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ವೇಳಾಪಟ್ಟಿ ಕೆಳಕಂಡಂತಿರುತ್ತದೆ.

| | | |
|---|---|---|
| 1 | ಟೆಂಡರ್ ಸಂಖ್ಯೆ ಮತ್ತು ಪ್ರಕಟಣೆ ದಿನಾಂಕ | ಸಂ.KGT/PUR/KLB/SECURITY/05/2025-26<br>ದಿನಾಂಕ: 15/07/2025 |
| 2 | ಪ್ರಿ-ಬಿಡ್ ಸಭೆ ದಿನಾಂಕ | ದಿನಾಂಕ: 24/07/2025 |
| 3 | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 11/08/2025 ಸಂಜೆ 5.30 ಗಂಟೆಗೆ |
| 4 | ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ | ದಿನಾಂಕ: 12/08/2025<br>ಬೆಳಿಗ್ಗೆ 11.30 ಗಂಟೆಗೆ |
| 5 | ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ | ದಿನಾಂಕ: 13/08/2025 ಬೆಳಿಗ್ಗೆ 11.30 ಗಂಟೆಯ ನಂತರ ತಾಂತ್ರಿಕ ಲಕೋಟೆಯಲ್ಲಿ ಸಮಗ್ರ ದಾಖಲೆಗಳನ್ನು ಒದಗಿಸಿದ ಟೆಂಡರುಗಳನ್ನು ಮಾತ್ರ. |
| 6 | ಟೆಂಡರ್‌ನೊಂದಿಗೆ ಪಾವತಿಸಬೇಕಾದ | **ರೂ. 90,000/-** |
| 6 | ಇ.ಎಂ.ಡಿ.ಮೊತ್ತ | ನಿರ್ದೇಶಕರು, ಕೆಜಿಟಿಟಿಐ ಕಲಬುರಗಿ ಕೇಂದ್ರ, ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಹತ್ತಿರ, ಬಿಇಒ ಕಚೇರಿ ಹಿಂಭಾಗ, ರಾಜಾಪುರ ರಸ್ತೆ, ಕಲಬುರಗಿ - 585 103 |

ಆಸಕ್ತ ಟೆಂಡರ್‌ದಾರರು ಟೆಂಡರ್ ಪ್ರಸ್ತಾವನೆಗಳನ್ನು ನಿರ್ದೇಶಕರು, ಕೆಜಿಟಿಟಿಐ ಕಲಬುರಗಿ ರವರಿಗೆ ಸಲ್ಲಿಸುವುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಪೂರಕ ಪ್ರಕಟಣೆಗಳು, ಬದಲಾವಣೆಗಳು ಹಾಗೂ ತಿದ್ದುಪಡಿಗಳನ್ನು https://www.kgtti.com/kalaburagi-kgtti.html ವೆಬ್‌ಸೈಟ್‌ನಲ್ಲಿ

ಪ್ರಕಟಿಸಲಾಗುವುದು.

1) ಪೂರ್ಣಗೊಳಿಸಿದ ದ್ವಿ-ಲಕೋಟೆ ಟೆಂಡರ್ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ದಿನಾಂಕ: 11/08/2025 ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ: 12/08/2025 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆದು ಪರಿಶೀಲನೆ ಪ್ರಾರಂಭಿಸಲಾಗುವುದು.
2) ಹೆಚ್ಚಿನ ಮಾಹಿತಿಯನ್ನು ನಿರ್ದೇಶಕರು, ಕೆಜಿಟಿಟಿಐ ಕಲಬುರಗಿ ಕೇಂದ್ರ ಇವರಿಂದ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 08472-252111
3) ಟೆಂಡರ್‌ಗೆ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತ ರೂ. **90,000/-** ವನ್ನು RTGS/NEFT ಮುಖೇನ ಕೆಜಿಟಿಟಿಐ ಕಲಬುರಗಿ **A/cNo: 0873101036983, IFSC CODE-CNRB0000873** CANARA BANK STAITION BAZAR BRANCH KALABURAGI ಪಾವತಿಸಬೇಕು.
4) ಟೆಂಡರ್ ಅಧಿಸೂಚನೆಯು ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ದಿನದಿಂದ 17 ದಿನಗಳವರೆಗೆ ಚಾಲ್ತಿಯಲ್ಲಿರುತ್ತದೆ.
5) ಯಾವುದೇ ಏಜೆನ್ಸಿಯ ಟೆಂಡರ್ ಪ್ರಸ್ತಾವನೆಯನ್ನು ಇ.ಎಂ.ಡಿ ಮೊತ್ತ ಕೆಜಿಟಿಟಿಐ ಕಲಬುರಗಿ S/B Accountನಲ್ಲಿ ಜಮೆಯಾಗಿರುವುದನ್ನು ಖಾತ್ರಿ ಪಡಿಸಿದ ನಂತರವೇ ಪರಿಶೀಲನೆಗೆ ಸ್ವೀಕರಿಸಲಾಗುತ್ತದೆ. ತಪ್ಪಿದಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುತ್ತದೆ. ಈ ಕೆಳಗಿನ ಷರತ್ತಿಗೆ ಒಳಪಟ್ಟು ಇ.ಎಂ.ಡಿ ಮೊತ್ತವನ್ನು ಬಿಡ್ದುದಾರರು ಜಮೆ ಮಾಡಬೇಕು.
    1) ಇ.ಎಂ.ಡಿ ಮೊತ್ತವನ್ನು RTGS/NEFT ರೂಪದಲ್ಲಿ ಏಕ ಕಂತಿನಲ್ಲಿ ಪಾವತಿಸಬೇಕು.
    2) ಬಿಡ್ ಪಡೆಯಲು ವಿಫಲರಾದ ಬಿಡ್ದುದಾರರಿಗೆ ಇ.ಎಂ.ಡಿ ಮೊತ್ತವನ್ನು ಸದರಿ ಪ್ರಕ್ರಿಯೆಯಲ್ಲಿ ಯಶಸ್ವಿಯಾದ ಬಿಡ್ದುದಾರರ ಘೋಷಣೆಯಾದ ದಿನಾಂಕದಿಂದ 8 ವಾರಗಳೊಳಗೆ ಹಿಂದಿರುಗಿಸಲಾಗುವುದು.
    3) ಯಶಸ್ವಿ ಬಿಡ್ದುದಾರರು ನೀಡಿರುವ ಇ.ಎಂ.ಡಿ ಮೊತ್ತವನ್ನು ಭದ್ರತಾ ಠೇವಣಿ ನೀಡಿದ ನಂತರ ಅಥವಾ ಕರಾರು ಒಪ್ಪಂದದಲ್ಲಿನ ಷರತ್ತುಗಳ ಮೇರೆಗೆ ಹಿಂದಿರುಗಿಸಲಾಗುವುದು.

6) ಇ.ಎಂ.ಡಿ ಮೊತ್ತವನ್ನು ಈ ಕೆಳಕಂಡ ಪ್ರಕರಣ/ಸಂದರ್ಭಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
    I. ಬಿಡ್ದುದಾರ ಪ್ರಸ್ತಾವನೆಯನ್ನು ಬದಲಿಸಿದರೆ ಅಥವಾ ಹಿಂಪಡೆದರೆ;
    II. ಬಿಡ್ದುದಾರ ಪ್ರಸ್ತಾವನೆಯ ಕೊನೆಯ ದಿನಾಂಕ ಹಾಗೂ ಪ್ರಸ್ತಾವನೆಯ ವೆಲಿಡಿಟಿ ಕೊನೆಗೊಳ್ಳುವ ದಿನಾಂಕಗಳ ನಡುವೆ ಪ್ರಸ್ತಾವನೆಯನ್ನು ಹಿಂಪಡೆದರೆ;
    III. ಯಶಸ್ವಿ ಬಿಡ್ದುದಾರರ Performance security (ಕಾರ್ಯಾಧಾರಿತ ಭದ್ರತಾ ಠೇವಣಿ)ಯನ್ನು ನಿಗದಿತ ದಿನಾಂಕದೊಳಗೆ ನೀಡಲು ವಿಫಲರಾದರೆ;
    IV. ಟೆಂಡರ್ ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲೆ ಪತ್ರಗಳಲ್ಲಿ ಬಿಡ್ದುದಾರರು ನೀಡಿರುವ ಯಾವುದೇ ಮಾಹಿತಿ ಲೋಪ ಪೂರಿತವಾದರೆ ಅಥವಾ ಸುಳ್ಳೆಂದು ಸಾಬೀತಾದರೆ;
    V. ಯಶಸ್ವಿ ಬಿಡ್ದುದಾರರು ಕಾರ್ಯಾದೇಶ ಪಡೆದ ನಂತರ ನಿಗದಿತ ಸಮಯದೊಳಗೆ ಸೇವೆ ಒದಗಿಸಲು ವಿಫಲರಾದರೆ;
    VI. ಯಶಸ್ವಿ ಬಿಡ್ದುದಾರ ಕರಾರು ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ವಿಫಲನಾದರೆ;

7) ಕಾರ್ಯಾಧಾರಿತ ಭದ್ರತೆ (**Performance Security**) : ಯಶಸ್ವಿ ಟೆಂಡರ್‌ದಾರರು ಕಾರ್ಯಾಧಾರಿತ ಭದ್ರತೆಯನ್ನು ವಾರ್ಷಿಕ ಕಾರ್ಯಾದೇಶ ಮೊತ್ತದ ಶೇಕಡಾ 5 ರಷ್ಟು ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಮೂಲಕ ಒದಗಿಸಬೇಕು. ಈ ಬ್ಯಾಂಕ್ ಗ್ಯಾರಂಟಿಯನ್ನು ಕಾರ್ಯಾದೇಶ ನೀಡಿದ ದಿನಾಂಕದಿಂದ 7 ದಿನಗಳೊಳಗಾಗಿ ಮತ್ತು ಕರಾರು ಒಪ್ಪಂದಕ್ಕೆ ಸಹಿ ಮಾಡುವ ಮುನ್ನ ಒದಗಿಸಬೇಕು. ಬ್ಯಾಂಕ್ ಗ್ಯಾರಂಟಿಯ ಅವಧಿಯು ಕಾರ್ಯಾದೇಶ ನೀಡಿದ ದಿನಾಂಕದಿಂದ 14 ತಿಂಗಳು ಚಾಲ್ತಿ ಅವಧಿ ಹೊಂದಿರಬೇಕು. ಆಯ್ಕೆಯಾದ ಏಜೆನ್ಸಿಯವರು ತೃಪ್ತಿಕರವಾಗಿ ಸೇವೆ ಸಲ್ಲಿಸದ ಪಕ್ಷದಲ್ಲಿ ಈ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

8) **ಟೆಂಡರ್ ಸಲ್ಲಿಸುವಿಕೆ** : ಟೆಂಡರ್‌ದಾರರು ದ್ವಿ-ಲಕೋಟೆ ಪದ್ಧತಿಯಲ್ಲಿ ಪ್ರತ್ಯೇಕವಾಗಿ ದಿನಾಂಕ: 11/08/2025 ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸುವುದು. ಟೆಂಡರ್ ಪ್ರಸ್ತಾವನೆ ಸಲ್ಲಿಸುವ ಅವಧಿಯನ್ನು ವಿಸ್ತರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಹೊಂದಿರುತ್ತದೆ. ತಾಂತ್ರಿಕ ಬಿಡ್ (ನಮೂನೆ-1) ರಲ್ಲಿ ಸಲ್ಲಿಸುವುದು.

9) ದ್ವಿ-ಲಕೋಟೆಯಲ್ಲಿ ತಾಂತ್ರಿಕ ಬಿಡ್ ಮತ್ತು ಹಣಕಾಸಿನ ದರಪಟ್ಟಿಯನ್ನು ಪ್ರತ್ಯೇಕವಾಗಿ ನಿರ್ದೇಶಕರು ಕೆಜಿಟಿಟಿಐ ಕಲಬುರಗಿ ಕೇಂದ್ರಕ್ಕೆ ಸಲ್ಲಿಸಬೇಕು.

10) **ಟೆಂಡರ್ ತೆರೆಯುವುದು ಮತ್ತು ಮೌಲ್ಯ ಮಾಪನ ಮಾಡುವುದು**:- ದಿನಾಂಕ: 12/08/2025 ರಂದು ಪೂರ್ವಾಹ್ನ 11.30 ಗಂಟೆಗೆ ಟೆಂಡರಿನ ತಾಂತ್ರಿಕ ಬಿಡ್‌ಗಳನ್ನು ತೆರೆದು ಪರಿಶೀಲನೆಯನ್ನು ಪ್ರಾರಂಭಿಸಲಾಗುವುದು. ತಾಂತ್ರಿಕ ಬಿಡ್‌ಗಳನ್ನು ಟೆಂಡರ್ ನಿಬಂಧನೆಗಳು ಮತ್ತು ಟೆಂಡರ್ ದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು. ಎಲ್ಲಾ ರೀತಿಯಲ್ಲೂ ಸರಿಯಾಗಿರುವ ತಾಂತ್ರಿಕ ಬಿಡ್‌ಗಳನ್ನು ಮಾತ್ರ ಒಪ್ಪಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಬಿಡ್‌ಗಳನ್ನು ತೆರೆದು ಪರಿಶೀಲಿಸಲಾಗುವುದು.

11) **ಟೆಂಡರ್ ಅವಾರ್ಡ್ ಮಾಡುವುದು** :-

1) ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ ಅತೀ ಕಡಿಮೆ ಸೇವಾ ಶುಲ್ಕ ದರವನ್ನು ನಮೂದಿಸಿದ ಎಲ್-1 ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಿ ಅವರಿಗೆ ಕಾರ್ಯಾದೇಶ ನೀಡಲಾಗುವುದು. ಅವಶ್ಯವಿದ್ದಲ್ಲಿ ಈ ಕಡಿಮೆ ಸೇವಾ ಶುಲ್ಕ ನಮೂದಿಸಿದ ಟೆಂಡರ್‌ದಾರರೊಡನೆ ದರ ಸಂಧಾನ ಮಾಡಲು ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

2) ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಟೆಂಡರುದಾರರು ನಮೂದಿಸಿದ ಸೇವಾ ಶುಲ್ಕವು ಸಮವಾಗಿದ್ದಲ್ಲಿ ಹಾಗು ಎಲ್-1 ಆಗಿದ್ದಲ್ಲಿ, ಟೆಂಡರುದಾರರ ಸೇವಾವದಿಯ ಅನುಭವ, ಗುತ್ತಿಗೆದಾರರ ಸಿಬ್ಬಂದಿ ಸಂಖ್ಯೆ, ಟೆಂಡರುದಾರರ ವಾರ್ಷಿಕ ವಹಿವಾಟು ಇವುಗಳನ್ನು ಪರಿಗಣಿಸಿ ಯಶಸ್ವಿ ಟೆಂಡರದಾರನು ಆಯ್ಕೆ ಮಾಡಲು ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

3) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಕೆಜಿಟಿಟಿಐ ಕಲಬುರಗಿ ಕೇಂದ್ರ ಹೊಂದಿರುತ್ತದೆ.

4) ಟೆಂಡರ್‌ದಾರರ ಗುತ್ತಿಗೆಯ ಅವಧಿಯು ಗುತ್ತಿಗೆ ಕರಾರು ಪತ್ರಕ್ಕೆ ಸಹಿಮಾಡಿದ ದಿನದಿಂದ

ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತದೆ.

12) **ಟೆಂಡರ್‌ದಾರರಿಗೆ ಸೂಚನೆಗಳು:** ಟೆಂಡರ್ ಸಲ್ಲಿಸುವವರು ಯಾವುದೇ ಕಾನೂನಿನ ಅಡಿಯಲ್ಲಿ ಅನರ್ಹರೆಂದು ಪರಿಗಣಿಸಿರಬಾರದು. ಯಾವುದೇ ಇಲಾಖೆಯಿಂದ ಕಪ್ಪುಪಟ್ಟಿಗೆ ಸೇರಿಸಿರಬಾರದು. ಟೆಂಡರ್ ಸಲ್ಲಿಸುವವರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಈ ಟೆಂಡರ್‌ನ ದಸ್ತಾವೇಜು ದಾಖಲಾತಿಯಲ್ಲಿ ನೀಡಲಾಗಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾದಲ್ಲಿ ಟೆಂಡರ್‌ದಾರರು ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ಸಲ್ಲಿಸಿ/ಕಛೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು.

13) **ಟೆಂಡರ್‌ದಾರರ ಜವಾಬ್ದಾರಿಗಳು**:-

1) ಯಶಸ್ವಿ ಟೆಂಡರ್‌ದಾರರು ಗುತ್ತಿಗೆ ಕರಾರು ಪತ್ರಕ್ಕೆ ಸಹಿಮಾಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಒದಗಿಸಬೇಕು.
2) ಟೆಂಡರ್‌ದಾರರು ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಪ್ರಾಣಾಪಾಯ-ಆಕಸ್ಮಿಕ ಘಟನೆಗಳು ಸಂಭವಿಸಿದ್ದಲ್ಲಿ ಅದಕ್ಕೆ ಟೆಂಡರ್‌ದಾರರೇ ಹೊಣೆಗಾರರಾಗಿದ್ದು ಪರಿಹಾರ ನೀಡಲು ಬದ್ಧರಾಗಿರುತ್ತಾರೆ. ಇಲಾಖೆಯು ಈ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ.
3) ಟೆಂಡರ್‌ದಾರರು ನಿಯೋಜಿಸುವ ಸಿಬ್ಬಂದಿಗಳು ಕಛೇರಿಗಳಲ್ಲಿ ನಷ್ಟ ಉಂಟು ಮಾಡಿದ್ದಲ್ಲಿ ಅದನ್ನು ಟೆಂಡರ್‌ದಾರರೇ ಭರಿಸಬೇಕಾಗುತ್ತದೆ.
4) ನಿಯೋಜಿಸುವ ಸಿಬ್ಬಂದಿಗಳು ಉತ್ತಮ ನಡತೆ ಹೊಂದಿರತಕ್ಕದ್ದು, ಪಾನಮತ್ತರಾಗಿರುವುದು, ಭಂಗಿ, ಸಿಗರೇಟು ಸೇದುವುದು ನಿಷೇದಿಸಿದೆ. ಯಾವುದೇ ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿರಬಾರದು.
5) ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೀಡುವ ದರಪಟ್ಟಿಗಳಲ್ಲಿ ಅವಧಿಗೆ ಅನ್ವಯಿಸುವಂತೆ Fixed ಆಗಿರಬೇಕು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಸಾಧ್ಯವಿರುವುದಿಲ್ಲ.

14) **ಸಿಬ್ಬಂದಿ ನಿಯೋಜನೆ ಹಾಗೂ ವೇತನ ಜವಾಬ್ದಾರಿ**:-

1) ಟೆಂಡರ್‌ದಾರರು ಹೊರಗುತ್ತಿಗೆ ಸಿಬ್ಬಂದಿಗಳ ಮಾಸಿಕ ವೇತನವನ್ನು ಕಾರ್ಮಿಕ ಇಲಾಖೆಯು ದಿನಾಂಕ: 01/09/2025 ರಿಂದ 31/08/2026 ರ ಅವಧಿಗೆ ಕನಿಷ್ಟ ವೇತನ ಕಾಯ್ದೆಯ ಅಡಿಯಲ್ಲಿ ವಲಯವಾರು ನಿಗಧಿಪಡಿಸಿರುವ ದರಗಳನ್ವಯ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಸಂಬಂಧಪಟ್ಟ ಸಿಬ್ಬಂದಿಯವರುಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಮತ್ತು ಕಾಲಕಾಲಕ್ಕೆ ಪರಿಷ್ಕತಗೊಳ್ಳುವ ವೇತನವನ್ನು ವಲಯವಾರು ನಿಗಧಿಪಡಿಸಲಾಗುವ ದರಗಳನ್ವಯ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಸಂಬಂಧಪಟ್ಟ ಸಿಬ್ಬಂದಿಯವರುಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಹಾಗೂ ಕಡಿತಗಳನ್ನು ಸಂಬಂಧಪಟ್ಟ ನೌಕರರ ವೈಯಕ್ತಿಕ ಖಾತೆಗಳಿಗೆ ಜಮಾ ಮಾಡುವುದು.
2) ಕಾರ್ಮಿಕ ಇಲಾಖೆಯು ಕನಿಷ್ಟ ವೇತನ ಕಾಯ್ದೆಯ ಅಡಿಯಲ್ಲಿ ನಿಗಧಿಪಡಿಸಿರುವ

ದರಗಳನ್ವಯ ನಿಯಮಾನುಸಾರ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ.

3) ವಿವಿಧ ಸಿಬ್ಬಂದಿಗಳಿಗೆ ನೀಡಬೇಕಾದ ವೇತನದ ವಿವರಗಳನ್ನು ಯಶಸ್ವಿ ಟೆಂಡರ್‌ದಾರರಿಗೆ ನೀಡಲಾಗುವುದು. ಅದರಂತೆ ಪ್ರತಿ ಸಿಬ್ಬಂದಿಗೆ ಅನುಬಂಧ-3 ರಂತೆ ಸಂಚಿತ ಮೊತ್ತ (Consolidated pay) ನ್ನು ಸಂಬಂಧಪಟ್ಟ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಕಡ್ಡಾಯವಾಗಿ ನೇರವಾಗಿ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.

4) ಆಯ್ಕೆಗೊಂಡ ಟೆಂಡರ್‌ದಾರರು 1 ತಿಂಗಳ ಅವಧಿಯಲ್ಲಿ ಪ್ರತಿಯೊಬ್ಬ ಸಿಬ್ಬಂದಿಯ ಇ.ಪಿ.ಎಫ್, ಇ.ಎಸ್.ಐ. ಖಾತೆಯನ್ನು ತೆರೆಯಬೇಕು. ಒಂದು ವೇಳೆ ಖಾತೆ ತೆರೆಯದಿದ್ದಲ್ಲಿ ಇದು ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಕಾರ್ಯಾದೇಶ ರದ್ದುಮಾಡಲಾಗುವುದು ಮತ್ತು ಈ ಖಾತೆ ತೆರೆಯುವವರೆಗಿನ ಅವಧಿಯಲ್ಲಿ ಯಾವುದೇ ನೌಕರರ ಇ.ಪಿ.ಎಫ್ ಮತ್ತು ಇ.ಎಸ್.ಐ ವಂತಿಕೆಗಳನ್ನು ಕಟಾವು ಮಾಡಬಾರದು. ಸಿಬ್ಬಂದಿಗಳ ವೈಯಕ್ತಿಕ ಇ.ಪಿ.ಎಫ್ ಮತ್ತು ಇ.ಎಸ್.ಐ ಖಾತೆಗಳನ್ನು ತೆರೆಯುವವವರೆಗೆ ಇಲಾಖೆಯು ಸಹ ತನ್ನ ವಂತಿಕೆಯ ಭಾಗವನ್ನು ಟೆಂಡರ್‌ದಾರರಿಗೆ ನೀಡುವುದಿಲ್ಲ.

5) ಟೆಂಡರ್‌ದಾರರು ಇ.ಪಿ.ಎಫ್, ಇ.ಎಸ್.ಐ, ವೃತ್ತಿ ತೆರಿಗೆ, ಸೇವಾ ತೆರಿಗೆ ಹಾಗೂ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನದ ದಾಖಲೆಗಳನ್ನು ಕೆಜಿಟಿಟಿಐಗೆ ಮಾಹೆವಾರು ಸಲ್ಲಿಸುವುದು.
6) ಸೇವಾದಾರರ ಮಾಸಿಕ ಬಿಲ್ಲಿನ ಮೊತ್ತವನ್ನು ಪಾವತಿಸುವಾಗ ನಿಯಮಾನುಸಾರ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ಅನ್ನು ಟಿ.ಡಿ.ಎಸ್.ಮೂಲಕ ಕಟಾಯಿಸಲಾಗುವುದು.

15) **ಸಿಬ್ಬಂದಿ ವೇತನದಲ್ಲಿ ಕಡಿತಗೊಳಿಸಬಹುದಾದ ಬಾಬ್ತುಗಳು:-**

1) **ರಾಜ್ಯ ಕಾರ್ಮಿಕ ವಿಮೆ**:- (**ESI**):- ಪ್ರತಿ ನೌಕರನ ಒಟ್ಟು ಸಂಬಳ ಅಂದರೆ ಮೂಲ ವೇತನ, ದಿನಭತ್ಯೆ, ಇತರೆ ಭತ್ಯೆಗಳನ್ನೊಳಗೊಂಡAತೆ 4.00 % ರಷ್ಟು ಇ.ಎಸ್.ಐ ವಂತಿಗೆಯನ್ನು ಕಡಿತ ಮಾಡಬೇಕು. ಇದರಲ್ಲಿ 0.75% ನೌಕರನ ವಂತಿಗೆ ಮತ್ತು 3.25% ಎಂಪ್ಲಾಯರ್ಸ್ ವಂತಿಕೆ ಆಗಿರುತ್ತದೆ. ಇ.ಎಸ್.ಐ ಇಲಾಖೆಯಲ್ಲಿ ಪ್ರತಿ ನೌಕರನ ಬಗ್ಗೆ ಒಂದು ಪ್ರತ್ಯೇಕ ಖಾತೆ ಸಂಖ್ಯೆ ಪಡೆದು ಅವರುಗಳ ಖಾತೆಗೆ ಟೆಂಡರ್‌ದಾರರು ಜಮಾ ಮಾಡಬೇಕು. ಇ.ಎಸ್.ಐ. ಅನ್ವಯವಾಗದ ಸಿಬ್ಬಂದಿಗಳ ವಂತಿಕೆಯನ್ನು ಕಡಿತ ಮಾಡಬಾರದು. ಒಂದು ವೇಳೆ ಕಡಿತಗಳನ್ನು ಕಟಾವು ಮಾಡಿ ಸಂಬಂಧಪಟ್ಟ ಇಲಾಖೆಗಳಿಗೆ ಜಮಾಮಾಡದಿದ್ದಲ್ಲಿ ಇದು ಟೆಂಡರ್ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.
2) **ಕಾರ್ಮಿಕ ಭವಿಷ್ಯ ನಿಧಿ** (**EPF**):- ಒಬ್ಬ ನೌಕರನ ಮೂಲ ವೇತನ ಬಾಬ್ತು ಒಟ್ಟು 25% ಇ.ಪಿ.ಎಫ್ ಕಡಿತ ಮಾಡಬೇಕು. ಇದರಲ್ಲಿ 12% ನೌಕರನ ವಂತಿಕೆಯಾಗಿದ್ದು ಇದನ್ನು ನೌಕರನಿಗೆ ನೀಡುವ ಮೂಲವೇತನ ಮತ್ತು ದಿನಭತ್ಯೆಯಲ್ಲಿ ಒಟ್ಟಾಗಿ ಕಡಿತಗೊಳಿಸಬೇಕು. ಉಳಿದ 13% ಎಂಪ್ಲಾಯರ್ಸ್ ವಂತಿಕೆಯಾಗಿದ್ದು, ಇದನ್ನು ಇಲಾಖೆಯು ಭರಿಸುವುದು. ಈ ರೀತಿ ಕಟಾವು ಮಾಡಿದ ನೌಕರರ ವಂತಿಗೆ ಮತ್ತು ಎಂಪ್ಲಾಯರ್ಸ್ ವಂತಿಗೆಯನ್ನು ಪ್ರತಿ ನೌಕರನಿಗೆ ಇ.ಪಿ.ಎಫ್ ಸಂಬAಧ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

3) **ವೃತ್ತಿ ತೆರಿಗೆ (Professional Tax):-** ನೌಕರರ ಒಟ್ಟು ಮಾಸಿಕ ವೇತನ ರೂ. 25,000/- ಗಳಿಗಿಂತ ಕಡಿಮೆ ಇರುವವರಿಗೆ ವೃತ್ತಿ ತೆರಿಗೆ ಅನ್ವಯವಾಗುವುದಿಲ್ಲ. ರೂ. 25,000/- ಗಳಿಗಿಂತ ಹೆಚ್ಚು ಮಾಸಿಕ ವೇತನ ಪಡೆಯುವವರಿಗೆ ಪ್ರತಿ ತಿಂಗಳು ರೂ. 200/- ಗಳನ್ನು ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು ಈ ಬಗ್ಗೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

4) **ಸರಕು ಮತ್ತು ಸೇವಾ ತೆರಿಗೆ** (**Goods and Service Tax**):- ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಒಟ್ಟು ವೇತನಕ್ಕೆ 18% ರಷ್ಟು ಜಿಎಸ್‌ಟಿಯನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಅದಕ್ಕಾಗಿ ಪ್ರತಿ ತಿಂಗಳು ಜಿಎಸ್‌ಟಿ ತೆರಿಗೆ ಪಾವತಿಸಿದ ಚಲನ್‌ಗಳನ್ನು ಇಲಾಖೆಗೆ ಹಾಜರುಪಡಿಸಬೇಕು.

(ಸೂಚನೆ: ಮೇಲ್ಕಂಡ ವಂತಿಕೆ/ಬಾಬ್ತುಗಳನ್ನು ಚಾಲ್ತಿಯಲ್ಲಿರುವ ದರಗಳನ್ವಯ
ನಿಯಮಾನುಸಾರ ಪಾವತಿಸುವುದು)

16) **ಟೆಂಡರ್ ಕರೆನ್ಸಿ :** ದರಪಟ್ಟಿಗಳನ್ನು ಭಾರತ ದೇಶದ ರೂಪಾಯಿಗಳಲ್ಲಿ ನಮೂದಿಸುವುದು.

17) **ಇತರೆ ಮುಖ್ಯವಾದ ನಿಬಂಧನೆಗಳು**

1) ಟೆಂಡರ್‌ದಾರರು ಸೇವಾ ಶುಲ್ಕ ದರವನ್ನು ತೆರಿಗೆ ಸೇರಿ ಶೇಕಡಾವಾರು (ಪರ್ಸೆಂಟೇಜ್) ಆಧಾರದ ಮೇಲೆ ಪ್ರತಿ ಹುದ್ದೆಗೆ ಸಂಬAಧಿಸಿದAತೆ ದರಪಟ್ಟಿಯನ್ನು ನೀಡುವುದು.
2) ಸಂಬಳವನ್ನು ಕೆಜಿಟಿಟಿಐರವರು ಟೆಂಡರ್‌ದಾರರಿಗೆ ನೀಡಿದ ದಿನವೇ ECS ಮೂಲಕ ಎಲ್ಲಾ ಸಿಬ್ಬಂದಿ ವರ್ಗದವರಿಗೆ ನೀಡಬೇಕು.
3) ಟೆಂಡರ್‌ದಾರರು ಸಿಬ್ಬಂದಿವರ್ಗದವರಿಗೆ ಸೇರಬೇಕಾದ ESI ಮತ್ತು PF ಗೆ ಸಂಬAಧಿಸಿದ ಶುಲ್ಕವನ್ನು ಕೆಜಿಟಿಟಿಐರವರಿಂದ ಪಡೆದು ಅದನ್ನು ಸಂಬಂಧಿಸಿದ ಇಲಾಖೆರವರಿಗೆ ಪ್ರತಿ ತಿಂಗಳು ತಪ್ಪದೆ ಪಾವತಿ ಮಾಡಬೇಕು ಹಾಗೂ ಚಲನ್ ಪ್ರತಿಗಳನ್ನು ಕೆಜಿಟಿಟಿಐ ರವರಿಗೆ ನೀಡುವುದು.
4) ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೀಡುವ ದರಪಟ್ಟಿಗಳಲ್ಲಿ ಅವಧಿಗೆ ಅನ್ವಯಿಸುವಂತೆ Fixed ಆಗಿರಬೇಕು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಸಾಧ್ಯವಿರುವುದಿಲ್ಲ.
5) ಸೇವಾ ಶುಲ್ಕ ಶೂನ್ಯ ನೀಡಿದ್ದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೀಡುವ ಸಿಬ್ಬಂದಿವರ್ಗ ನೀಡುವ ಬಗ್ಗೆ ಪರಿಗಣಿಸುವುದಿಲ್ಲ.
6) ಟೆಂಡರ್‌ದಾರರು ಹೊರಗುತ್ತಿಗೆ ಆಧಾರದ ಮೇಲೆ ನೀಡುವ ಸಿಬ್ಬಂದಿವರ್ಗದವರನ್ನು ನಿರ್ಬಂಧಿತ ಅವಧಿಗೆ ಮಾತ್ರ ನೀಡುವುದು.
7) ಬದಲಿ ಸಿಬ್ಬಂದಿವರ್ಗದವರನ್ನು 48 ಘಂಟೆಯೊಳಗೆ ನೀಡುವುದು, ತಪ್ಪಿದ್ದಲ್ಲಿ ಪ್ರತಿದಿನದ ಪ್ರತಿ ಸಿಬ್ಬಂದಿ ವಿಳಂಬಕ್ಕೆ ರೂ. 100/- ಗಳ ಪೆನಾಲ್ಟಿ ನೀಡಬೇಕಾಗುತ್ತದೆ.
8) ಟೆಂಡರ್‌ದಾರರು ಕಾಂಟ್ರಾಕ್ಟ್ ಸಂಬಂಧಿಸಿದ ವಿಷಯಗಳ ಬಗ್ಗೆ ಕಾಲಕಾಲಕ್ಕೆ Update ಹಾಗೂ ಆಡಿಟ್‌ನ ಪ್ರತಿಯನ್ನು 3 ತಿಂಗಳಿಗೊಮ್ಮೆ ಮಾಡಿ ಎಲ್ಲಾ ಸರಿ ಇರುವ ಬಗ್ಗೆ ದೃಢೀಕರಿಸುವುದು.

9) ಟೆಂಡರ್‌ದಾರರು ಪ್ರತಿಯೊಬ್ಬ ಸಿಬ್ಬಂದಿವರ್ಗದವರಿಗೆ ಸುಲಭವಾಗಿ ನಿರ್ವಹಿಸಲು ಬ್ಯಾಂಕಿಂಗ್ ಸೌಲಭ್ಯವನ್ನು ಕಲ್ಪಿಸುವುದು. (ಡೆಬಿಟ್‌ಕಾರ್ಡ್ ನೀಡುವುದು)
10) ಟೆಂಡರ್‌ದಾರರು ಪ್ರತಿಯೊಬ್ಬ ಸಿಬ್ಬಂದಿವರ್ಗದವರಿಗೆ ಗುರುತಿನ ಚೀಟಿ ನೀಡುವುದು.
11) ಟೆಂಡರ್‌ದಾರರು ಪ್ರತಿ ವರ್ಷವು Annual Trunover ರೂ. 30.00 ಲಕ್ಷಗಳು ಆಗಿರಬೇಕು ಸರಾಸರಿ ಮಾತ್ರವನ್ನು ಅಂಗೀಕರಿಸಲಾಗುವುದಿಲ್ಲ.
12) ಆದಾಯ ತೆರಿಗೆ ಶೇ. 2 ರಷ್ಟು ಮತ್ತು ಶೇ. 2 ರಷ್ಟು ಜಿಎಸ್‌ಟಿ-ಟಿಡಿಎಸ್ ಅನ್ನು Invoice raise ಮಾಡಿರುವ ಬಿಲ್ಲಿನ (ಜಿಎಸ್‌ಟಿ ಹೊರತುಪಡಿಸಿ) ಮೊತ್ತಕ್ಕೆ ಅನುಗುಣವಾಗಿ ಟಿಡಿಎಸ್ ಕಡಿತಗೊಳಿಸುವುದು.
13) ಸರ್ವಿಸ್ ಟ್ಯಾಕ್ಸ್ ಹಾಲಿ ನಿಯಮಗಳ ಪ್ರಕಾರ ಪಾವತಿಮಾಡುವುದು, ಏನಾದರು ಹೆಚ್ಚಿಗೆ/ಕಡಿಮೆ ಆಗಿದ್ದ ಪಕ್ಷದಲ್ಲಿ ಆ ನಿಯಮವನ್ನು ಪಾಲಿಸುವುದು.

18) **ಇತರೆ ನಿಬಂಧನೆಗಳು**:

1) ಗುತ್ತಿಗೆ ಅವಧಿಯಲ್ಲಿ ಅಥವಾ ಗುತ್ತಿಗೆ ನಂತರ ಉದ್ಭವಿಸಬಹುದಾದ ತಕರಾರುಗಳನ್ನು ಕಲಬುರಗಿ ವ್ಯಾಪ್ತಿಯ ನ್ಯಾಯಾಲಯದಲ್ಲಿ ಮಾತ್ರ ಬಗೆಹರಿಸುವುದು.
2) ಇ.ಪಿ.ಎಫ್., ಇ.ಎಸ್.ಐ. ವೃತ್ತಿ ಮತ್ತು ಸೇವಾ ತೆರಿಗೆಗಳ ಕಡಿತ ನೌಕರನ ವಂತಿಕೆಯಿಂದ ಕಡಿತ ಮಾಡಿ ಅವುಗಳನ್ನು ಜಮಾ ಮಾಡದಿದ್ದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ ಮತ್ತು ಈ ಹಣ ದುರುಪಯೋಗದ ಮೇಲೆ ಟೆಂಡರ್‌ದಾರನ ಮೇಲೆ ಇಲಾಖೆಯು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಹಕ್ಕುಳ್ಳದ್ದಾಗಿರುತ್ತದೆ.
3) ಟೆಂಡರ್‌ದಾರರು ತಾನು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಾರದು ಮತ್ತು ಉಪಗುತ್ತಿಗೆ ನೀಡಬಾರದು. ಇದು ಟೆಂಡರ್ ಷರತ್ತಿನ ಉಲ್ಲಂಘನೆ ಆಗುತ್ತದೆ.
4) ಎಲ್ಲಾ ಟೆಂಡರ್ ಷರತ್ತುಗಳನ್ನು ಪಾಲಿಸುವುದಾಗಿಯೂ ಯಶಸ್ವಿ ಟೆಂಡರ್‌ದಾರರು ಗುತ್ತಿಗೆ ಕರಾರು ಒಪ್ಪಂದಕ್ಕೆ ಸಹಿ ಮಾಡಬೇಕು.
5) ಗುತ್ತಿಗೆದಾರರ ಗುತ್ತಿಗೆಯ ಅವಧಿಯನ್ನು ಮೊಟಕುಗೊಳಿಸುವ ಅಧಿಕಾರ ನಿರ್ದೇಶಕರು, ಕೆಜಿಟಿಟಿಐ ಕಲಬುರಗಿ ಇವರಿಗೆ ಪ್ರದತ್ತವಾಗಿರುತ್ತದೆ.

ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ

## 1. ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು

1) ಟೆಂಡರ್‌ದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಕಾಯ್ದೆ 1961ರಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಾಯಿಸಿಕೊAಡಿರಬೇಕು.

2) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 137 ಎಇಎಸ್ 2022 ದಿನಾಂಕ: 19/05/2022 ರನ್ವಯ ಹೊರಗುತ್ತಿಗೆ ನೇಮಕಾತಿಯಲ್ಲಿ ಶೇ. 33 ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಾಗಿರಿಸಬೇಕಾಗಿದೆ.

3) ಟೆಂಡರ್‌ದಾರರು ಸಲ್ಲಿಸಿರುವ ಬಿಡ್‌ಗಳನ್ನು ತೆರೆದು ತಾಂತ್ರಿಕ ಪರಿಶೀಲನೆ ನಡೆಸಲಾಗುವುದು. ತಾಂತ್ರಿಕ ಬಿಡ್‌ಗಳಲ್ಲಿ ಅರ್ಹತೆ ಪಡೆದ ಟೆಂಡರ್‌ದಾರರುಗಳ ಹಣಕಾಸಿನ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.

4) ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. ಸಂಸ್ಥೆ/ಕಂಪೆನಿ/ಏಜೆನ್ಸಿಯು ಕಳೆದ 3 ವರ್ಷಗಳಲ್ಲಿ ಪ್ರತಿ ತಿಂಗಳು (2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಪಾವತಿಸಿರಬೇಕು.

5) ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. ಸಂಸ್ಥೆ/ಕಂಪೆನಿ/ಏಜೆನ್ಸಿಯು ಕಳೆದ 3 ವರ್ಷಗಳಲ್ಲಿ (2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಪ್ರತಿ ತಿಂಗಳು ರಾಜ್ಯ ಕಾರ್ಮಿಕ ವಿಮೆ ಪಾವತಿಸಿರಬೇಕು.

6) ಆದಾಯ ತೆರಿಗೆ ಕಾಯ್ದೆಯಡಿ ಪಾನ್ ಕಾರ್ಡ್ ಹೊಂದಿರಬೇಕು. ಸಂಸ್ಥೆ/ಕಂಪೆನಿ/ಏಜೆನ್ಸಿಯು ಆದಾಯ ತೆರಿಗೆಯನ್ನು ಕಳೆದ 3 ವರ್ಷಗಳಲ್ಲಿ (2021-22, 2022-23 ಮತ್ತು 2023-24 ಆರ್ಥಿಕ ವರ್ಷಗಳಲ್ಲಿ)ಪಾವತಿಸಿರುವ ಬಗ್ಗೆ ಆದಾಯ ತೆರಿಗೆ ರಿಟರ್ನ್ಸ್ ದಾಖಲೆಗಳನ್ನು ಒದಗಿಸಬೇಕು.

7) ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿ ಕಡ್ಡಾಯವಾಗಿ ನೋಂದಣಿ ಮಾಡಿರಬೇಕು. ಸಂಸ್ಥೆ/ಕಂಪೆನಿ/ ಏಜೆನ್ಸಿಯು (2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಸರಕು ಮತ್ತು ಸೇವಾ ತೆರಿಗೆ ಪಾವತಿಸಿರುವ ಬಗ್ಗೆ ಪ್ರತಿ ತಿಂಗಳ ರಿಟರ್ನ್ಸ್‌ಗಳನ್ನು ಹೊಂದಿರಬೇಕು.

8) ವೃತ್ತಿ ತೆರಿಗೆ ನೋಂದಣಿ ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. (2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಪ್ರತಿ ತಿಂಗಳು ಸೇವಾ ತೆರಿಗೆ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಹೊಂದಿರಬೇಕು. 2023-24 ಸಾಲಿನ IT ರಿಟರ್ನ್ಸ್ ಪೂರ್ಣವಾಗಿರದಿದ್ದಲ್ಲಿ ನಂತರ ಅದನ್ನು ಸಲ್ಲಿಸಲು ಕೋರಲಾಗಿದೆ.

9) ಈ ಸಂಬಂಧ ಕಳೆದ 3 ವರ್ಷಗಳಲ್ಲಿ ಅಂದರೆ (2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ರಲ್ಲಿ ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ವಿವರಗಳು, ಆಡಿಟ್ ವರದಿ ಮತ್ತು ದಾಖಲೆಗಳ ಪ್ರತಿಯನ್ನು ಸಲ್ಲಿಸಬೇಕು. ಪ್ರತಿ ವರ್ಷವು Annual Turnover ರೂ. 30.00 ಲಕ್ಷಗಳು ಆಗಿರಬೇಕು ಸರಾಸರಿ ಮೊತ್ತವನ್ನು ಅಂಗೀಕರಿಸಲಾಗುವುದಿಲ್ಲ. 2024-25 ಸಾಲಿನ ಆಡಿಟ್ ರಿಪೋರ್ಟ್ಸ್ ಪೂರ್ಣವಾಗಿರದಿದ್ದಲ್ಲಿ ನಂತರ ಅದನ್ನು ಸಲ್ಲಿಸಲು ಕೋರಲಾಗಿದೆ

10) 2022-23, 2023-24 ಮತ್ತು 2024-25 ನೇ ಸಾಲಿನಲ್ಲಿ ಕಾರ್ಮಿಕರ ಕಲ್ಯಾಣ ನಿಧಿಯ ವಂತಿಕೆಯನ್ನು ಪ್ರತಿ ತಿಂಗಳು ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಹೊಂದಿರಬೇಕು.

11) ಏಜೆನ್ಸಿಯು ಸರ್ಕಾರದ ಯಾವುದೇ ಇಲಾಖೆಗಳಲ್ಲಿ ಕಪ್ಪು ಪಟ್ಟಿಗೆ ಸೇರಿರಬಾರದು.

12) ಬಿಡ್ಡುದಾರ ಸಂಸ್ಥೆ ಅಥವಾ ಏಜೆನ್ಸಿಯು ಸ್ಥಳಿಯ ಸಂಸ್ಥೆಗಳ ಕಾಯ್ದೆ ಪ್ರಕಾರ ನೋಂದಣಿಯಾಗಿರಬೇಕು

13) ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ಹಾಗೂ ಇತರ ಎಲ್ಲಾ ದಾಖಲೆ ಪತ್ರಗಳನ್ನು ನೋಟರಿಯಿಂದ/ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅದರ ಪ್ರತಿಗಳನ್ನು ಸಲ್ಲಿಸಬೇಕು.

14) ಟೆಂಡರ್‌ದಾರರು ಪ್ರತಿ ವರ್ಷವು Annual Turnover ರೂ. 30.00 ಲಕ್ಷಗಳು ಆಗಿರಬೇಕು ಸರಾಸರಿ ಮೊತ್ತವನ್ನು ಅಂಗೀಕರಿಸಲಾಗುವುದಿಲ್ಲ.

15) ಟೆಂಡರ್‌ದಾರರು ನೇಮಕಾತಿ ಮಾಡಿದ ಪ್ರತಿ ಸಿಬ್ಬಂದಿಗೆ Accident Insurance Policy ಕನಿಷ್ಠ ರೂ. 100,000/- ಗಳ Coverage ವಿಮೆ ಮಾಡಬೇಕಾಗಿರುತ್ತದೆ.

16) ಕಂಪ್ಯೂಟರ್‌ನಿಂದ ಟೈಪ್‌ಮಾಡಿರುವ ದರಪಟ್ಟಿಗಳನ್ನು ಮಾತ್ರ ಸಲ್ಲಿಸುವುದು.

17) ಕೈಬರಹದಲ್ಲಿರುವ ದರಪಟ್ಟಿಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸಲಾಗುವುದಿಲ್ಲ.

18) ಟೆಂಡರುದಾರರು ದರಪಟ್ಟಿಗಳನ್ನು ಸಹಿ ಮಾಡಿ ದೃಢೀಕರಿಸಿರಬೇಕು.

ಮೇಲ್ಕಾಣಿಸಿದ ಎಲ್ಲಾ ದಸ್ತಾವೇಜು/ದಾಖಲೆಗಳ ಪತ್ರಗಳ ಮೂಲ ದಾಖಲೆಗಳನ್ನು ನಿರ್ದೇಶಕರು, ಕೆಜಿಟಿಟಿಐ ಕಲಬುರಗಿ ಸೂಚಿಸಿದಾಗ ಹಾಜರುಪಡಿಸಬೇಕು.

ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ

## 2. ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಬೇಕಾದ ದಾಖಲೆಗಳು

| ಕ್ರ.ಸಂ | ಸಲ್ಲಿಸಬೇಕಾದ ದಾಖಲೆಗಳು | ಹೌದು | ಇಲ್ಲ |
|---|---|---|---|
| 1 | ಪೂರ್ಣ ಮಾಹಿತಿಯೊಂದಿಗೆ ಭರ್ತಿ ಮಾಡಿದ ನಿಗದಿತ ಪ್ರಸ್ತಾವನೆಯನ್ನು ನಮೂನೆ-1, 2 ಹಾಗೂ 3 ಮತ್ತು ಅನುಬಂಧ-1, 2,3 ಮತ್ತು 4 ರೊಂದಿಗೆ ಸಲ್ಲಿಸಬೇಕು. | | |
| 2 | ರೂ. 90,000/- ಮೊತ್ತದ ಇ.ಎಂ.ಡಿ. RTGS/NEFT ಮೂಲಕ ಸಲ್ಲಿಸಬೇಕು. | | |
| 3 | ಟೆಂಡರ್‌ದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಕಾಯ್ದೆ 1961ರಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಾಯಿಸಿಕೊAಡಿರಬೇಕು. ಕಲಬುರಗಿ ಅಥವಾ ಇತರೆ ಜಿಲ್ಲೆಗಳಲ್ಲಿ ನೋಂದಣಿ ಸ್ಥಳ ಅಥವಾ ವ್ಯವಹಾರಿಕ ಕಛೇರಿ ಹೊಂದಿರಬೇಕು. (ನೋಂದಣಿ ಪತ್ರದ ಪ್ರತಿ ಲಗತ್ತಿಸಬೇಕು) | | |
| 4 | ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. ಸಂಸ್ಥೆ/ಕಂಪೆನಿ/ಏಜೆನ್ಸಿಯು ಕಳೆದ 3 ವರ್ಷಗಳಲ್ಲಿ ಪ್ರತಿ ತಿಂಗಳು (10) 2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು. | | |
| 5 | ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. ಸಂಸ್ಥೆ/ಕಂಪೆನಿ/ಏಜೆನ್ಸಿಯು ಕಳೆದ 3 ವರ್ಷಗಳಲ್ಲಿ (10) 2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ)ಪ್ರತಿ ತಿಂಗಳು ರಾಜ್ಯ ಕಾರ್ಮಿಕ ವಿಮೆ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು. | | |
| 6 | ಆದಾಯ ತೆರಿಗೆ ಕಾಯ್ದೆಯಡಿ ಪಾನ್ ಕಾರ್ಡ್ ಹೊಂದಿರಬೇಕು. ಸಂಸ್ಥೆ/ಕಂಪೆನಿ /ಏಜೆನ್ಸಿಯು ಆದಾಯ ತೆರಿಗೆಯನ್ನು ಕಳೆದ 3 ವರ್ಷಗಳಲ್ಲಿ (2021-22, 2022-23 ಮತ್ತು 2023-24 ಆರ್ಥಿಕ ವರ್ಷಗಳಲ್ಲಿ) ಪಾವತಿಸಿರುವ ಬಗ್ಗೆ ಆದಾಯ ತೆರಿಗೆ ರಿಟರ್ನ್ಸ್ ದಾಖಲೆಗಳನ್ನು ಒದಗಿಸಬೇಕು. | | |
| 7 | ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿ ಕಡ್ಡಾಯವಾಗಿ ನೋಂದಣಿ ಪ್ರಮಾಣ ಪತ್ರ ಹಾಗೂ (10) 2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಸರಕು ಮತ್ತು ಸೇವಾ ತೆರಿಗೆ ಪಾವತಿಸಿರುವುದಕ್ಕೆ ಎಸ್.ಟಿ-3 ಸರ್ವಿಸ್ ಟ್ಯಾಕ್ಸ್ ರಿಟರ್ನ್ ಮತ್ತು ಜಿಎಸ್‌ಟಿ-ಆರ್- 3ಬಿ ಜಿಎಸ್‌ಟಿ ರಿಟರ್ನ್ ಫೈಲ್ ಮಾಡಿರುವ ದಾಖಲೆಗಳನ್ನು ಲಗತ್ತಿಸುವುದು. | | |
| 8 | ವೃತ್ತಿ ತೆರಿಗೆ ನೋಂದಣಿ ಕಾಯ್ದೆಯಡಿ ನೊಂದಣಿ ಪ್ರಮಾಣ ಪತ್ರ ಲಗತ್ತಿಸುವುದು. ಏಪ್ರಿಲ್-2021 ರಿಂದ ಮಾರ್ಚ್-2024 ನೇ ಸಾಲಿನಲ್ಲಿ ವೃತ್ತಿ ತೆರಿಗೆಯನ್ನು ಭರ್ತಿ ಮಾಡಿರುವ ಬಗ್ಗೆ ಫಾರಂ-5ಎ ರಿಟರ್ನ್ ಫೈಲ್ ಮಾಡಿರುವ ಪ್ರತಿಗಳನ್ನು ಲಗತ್ತಿಸಿರಬೇಕು. | | |
| 9 | 10) 2022-23, 2023-24 ಮತ್ತು 2024-25 ನೇ ಆರ್ಥಿಕ ವರ್ಷಗಳಿಗೆ ಸಂಬಂಧಿಸಿದಂತೆ ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿದ ಸಂಬಂಧ ವಾರ್ಷಿಕ ಆದಾಯ Annual Turnover ರೂ. 30.00 (ಮೂವತ್ತು | | |

| | | | |
|---|---|---|---|
| | ಲಕ್ಷಗಳು ಮಾತ್ರ) ಸೇವಾ ದರ ಒಳಗೊಂಡಂತೆ ವಹಿವಾಟು ಮಾಡಿರುವ ಬಗ್ಗೆ ಶಾಸನ ಬದ್ದ ಆಡಿಟ್ ವರದಿ ಪ್ರತಿಗಳನ್ನು ಲಗತ್ತಿಸಬೇಕು. | | |
| 10 | 10) 2022-23, 2023-24 ಮತ್ತು 2024-25ನೇ ಸಾಲಿನ ಡಿಸೆಂಬರ್-31 ಕ್ಕೆ ಅಂತ್ಯವಾಗುವ ವರ್ಷಗಳ ಸಂಬಂಧ ಕಾರ್ಮಿಕ ಕಲ್ಯಾಣ ನಿಧಿಯನ್ನು ಭರಿಸಿರುವ ಕುರಿತು ದಾಖಲೆಗಳನ್ನು ಲಗತ್ತಿಸುವುದು. | | |
| 11 | ಟೆಂಡರ್‌ದಾರರು ಕಳೆದ 3 ವರ್ಷಗಳಲ್ಲಿ ನಡೆಸಿದ ವಹಿವಾಟುಗಳ ಲೆಕ್ಕಪರಿಶೋಧನೆ (ಆಡಿಟ್) ಆಗಿರಬೇಕು. (10) 2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಸಂಬಂಧಿಸಿದ ಆಡಿಟ್ ವರದಿ ಹಾಗೂ ಶಾಸನಬದ್ಧ ಆಡಿಟರ್ ಪ್ರಮಾಣ ಪತ್ರ ನೀಡುವುದು. | | |
| 12 | 01/04/2022 ರಿಂದ 31/03/2025 ದಿನಾಂಕದವರೆಗೆ ಚುನಾಯಿತ ಸದಸ್ಯರು, ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್ ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೂ ಕಪ್ಪು ಪಟ್ಟಿಯಲ್ಲಿ ಸೇರಿರದೇ ಇರುವ ಬಗ್ಗೆ ಹಾಗೂ ಚುನಾಯಿತ ಸದಸ್ಯರಲ್ಲದೇ ಇರುವ ಬಗ್ಗೆ ನೋಟರಿಯವರಿಂದ ದೃಢೀಕರಿಸಿದ ಪ್ರತಿ ಸಲ್ಲಿಸುವುದು. | | |
| 13 | ಸ್ಥಳೀಯ ಸಂಸ್ಥೆಗಳಲ್ಲಿ (ಗ್ರಾಮ ಪಂಚಾಯಿತಿ/ ಪಟ್ಟಣ ಪಂಚಾಯಿತಿ/ ಪುರಸಭೆ/ನಗರಸಭೆ/ ಮಹಾನಗರ ಪಾಲಿಕೆ, ಬಿಬಿಎಂಪಿ) ಉದ್ದಿಮೆ/ ವಾಣಿಜ್ಯ ಚಟುವಟಿಕೆ ಕೈಗೊಳ್ಳಲು ಪರವಾನಗಿಯನ್ನು 01/04/2019 ರ ಮುಂಚಿತವಾಗಿ ಪಡೆದಿರಬೇಕು. ಐದು ವರ್ಷಗಳ ನವೀಕೃತಗೊಂಡಿರುವ ಕುರಿತು ದಾಖಲೆಗಳನ್ನು ಲಗತ್ತಿಸುವುದು. ಪ್ರಸ್ತುತ 2025-26 ನೇ ಸಾಲಿಗೆ ನವೀಕರಣಗೊಂಡಿರಬೇಕು. (ಪ್ರತಿ ಲಗತ್ತಿಸುವುದು) | | |
| 14 | ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ಹಾಗೂ ಇತರ ಎಲ್ಲಾ ದಾಖಲೆ ಪತ್ರಗಳನ್ನು ನೋಟರಿಯಿಂದ/ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅದರ ಪ್ರತಿಗಳನ್ನು ಸಲ್ಲಿಸಬೇಕು. | | |
| 15 | ಟೆಂಡರ್‌ದಾರರು ಪ್ರತಿ ವರ್ಷವು Annual Turnover ರೂ. 30.00 ಲಕ್ಷಗಳು ಆಗಿರಬೇಕು ಸರಾಸರಿ ಮಾತ್ರವನ್ನು ಅಂಗೀಕರಿಸಲಾಗುವುದಿಲ್ಲ. | | |
| 16 | ಟೆಂಡರ್‌ದಾರರು ನೇಮಕಾತಿ ಮಾಡಿದ ಪ್ರತಿ ಸಿಬ್ಬಂದಿಗೆ Accident Insurance Policy ಕನಿಷ್ಠ ರೂ. 1,00,000/- ಗಳ Coverage ಮಾಡಬೇಕಾಗಿರುತ್ತದೆ. | | |
| 17 | ಟೆಂಡರ್‌ದಾರರು ಸಲ್ಲಿಸುವ ಎಲ್ಲಾ ದಾಖಲೆಗಳ ಮೇಲೆ ಸಹಿ ಮಾಡಿ ದೃಢೀಕರಿಸಿರಬೇಕು | | |

ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ

## 1. ಆರ್ಥಿಕ ಬಿಡ್ ಸಲ್ಲಿಸುವ ಬಗ್ಗೆ.

1) ಟೆಂಡರ್‌ದಾರರು ಆರ್ಥಿಕ ಬಿಡ್‌ನಲ್ಲಿ ಸೇವಾ ಶುಲ್ಕದ ದರಗಳನ್ನು (ಶೇಕಡಾವಾರು) ಮಾತ್ರ ನಮೂದಿಸತಕ್ಕದ್ದು.

2) ಟೆಂಡರ್‌ದಾರರು ಸೇವಾ ಶುಲ್ಕದ ದರವನ್ನು 1.5% ರಷ್ಟು ಅಥವಾ ಅದಕ್ಕಿಂತ ಕಡಿಮೆ ನಮೂದಿಸಿದ ಟೆಂಡರ್‌ದಾರರ ಆರ್ಥಿಕ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

3) ಉಲ್ಲೇಖಿಸಲಾದ ಸೇವಾ ಶುಲ್ಕದ ದರವು ದಶಮಾಂಶದ ನಂತರ ಗರಿಷ್ಠ 2 ಅಂಕೆಗಳನ್ನು ಹೊಂದಿರಬಹುದು. ಎರಡಕ್ಕಿಂತಲೂ ಹೆಚ್ಚಿನ ಅಂಕೆ ಇದ್ದಲ್ಲಿ ಅಂತಹ ಆರ್ಥಿಕ ಬಿಡ್ ಅನ್ನು ಪರಿಗಣಿಸಲಾಗುವುದಿಲ್ಲ.

4) ಅಂಕಿಗಳಲ್ಲಿ ಹಾಗೂ ಅಕ್ಷರಗಳಲ್ಲಿ ನಮೂದಿಸಿರುವ ಸೇವಾ ಶುಲ್ಕದ ವಿವರಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಅಂತಹ ಆರ್ಥಿಕ ಬಿಡ್ ಅನ್ನು ತಿರಸ್ಕರಿಸಲಾಗುವುದು

5) ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಟೆಂಡರುದಾರರು ನಮೂದಿಸಿದ ಸೇವಾ ಶುಲ್ಕವು ಸಮವಾಗಿದ್ದಲ್ಲಿ ಹಾಗು ಎಲ್ -1 ಆಗಿದ್ದಲ್ಲಿ ಟೆಂಡರುದಾರರ ಸೇವಾವದಿಯ ಅನುಭವ, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳ ಸಂಖ್ಯೆ, ಗುತ್ತಿಗೆದಾರರ ಸಿಬ್ಬಂದಿ ಸಂಖ್ಯೆ ಟೆಂಡರುದಾರರ ವಾರ್ಷಿಕ ವಹಿವಾಟು ಇವುಗಳನ್ನು ಪರಿಗಣಿಸಿ ಟೆಂಡರದಾರನು ಆಯ್ಕೆ ಮಾಡಲಾಗುವುದು.

ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ

**ನಮೂನೆ -1**

**ಟೆಂಡರ್ ಪ್ರಸ್ತಾವನೆ - ನಿಗದಿತ ನಮೂನೆ**

**ಪ್ರಸ್ತಾವನೆ ಪತ್ರದ ನಮೂನೆ**

**(ಸಂಸ್ಥೆಯ ಲೆಟರ್‌ಹೆಡ್ ಹಾಳೆಯಲ್ಲಿ)**

ದಿನಾಂಕ:

ರವರಿಗೆ,
ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ.

ಮಾನ್ಯರೆ,

**ವಿಷಯ:** ಕೆಜಿಟಿಟಿಐ ಕಲಬುರಗಿ ಕೇಂದ್ರಕ್ಕೆ ವಾಚ್ ಮ್ಯಾನ್, ಹೌಸ್ ಕೀಪಿಂಗ್, ವಾಹನ ಚಾಲಕ, ಹಾಸ್ಟೆಲ್ ವಾರ್ಡನ್ ಮತ್ತು ಹಾಸ್ಟೆಲ್ ಅಟೆಂಡರ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಮಾನವ ಸಂಪನ್ಮೂಲ ಹೊರಗುತ್ತಿಗೆ ಸೇವಾದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿರುವ ಬಗ್ಗೆ.

**ಉಲ್ಲೇಖ:** ಟೆಂಡರ್ ಅಧಿಸೂಚನೆ ಸಂಖ್ಯೆ: ದಿನಾಂಕ:________.

***

ಬಿಡ್ಡುದಾರರಾಗಿ ________________ ಸಂಸ್ಥೆಯ ಪರವಾಗಿ ಪ್ರತಿನಿಧಿಸಿರುತ್ತಿರುವ ನಾವು ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅವಶ್ಯವಾದ ಎಲ್ಲಾ ಮಾಹಿತಿಗಳನ್ನು, ಸೂಚನೆಗಳನ್ನು, ನಿಬಂಧನೆಗಳನ್ನು ಓದಿ ಅರ್ಥೈಸಿಕೊಂಡು ಕೆಳಗೆ ಸಹಿ ಮಾಡಿರುವ ನಾವು ಪ್ರಸ್ತಾವನೆಯನ್ನು ಈ ಮೂಲಕ ಸಲ್ಲಿಸುತ್ತೇವೆ.

ಸದರಿ ಪ್ರಸ್ತಾವನೆಯು _____________ ದಿನಾಂಕದಿಂದ 30 ದಿನಗಳ ಅವಧಿಯವರೆಗೆ ಮಾನ್ಯತೆ/ಸಿಂಧುತ್ವ ಹೊಂದಿರುತ್ತದೆ.

ನಿಮ್ಮ ನಂಬುಗೆಯ

(ಸಂಸ್ಥೆಯ ಪರವಾಗಿ ಅಧಿಕೃತ ಸಹಿ)
ಸಹಿ ಮಾಡಿರುವವರ ಹೆಸರು ಹಾಗೂ ಪದನಾಮ

ಅಡಕ :

1) ತಾಂತ್ರಿಕ ಪ್ರಸ್ತಾವನೆ
2) ದೃಢೀಕೃತ ಪೂರಕ ದಾಖಲೆಪತ್ರಗಳು

**ನಮೂನೆ-2**

**(ಸಂಸ್ಥೆಯ ಲೆಟರ್ ಹೆಡ್‌ನಲ್ಲಿ ನೀಡುವ ತಾಂತ್ರಿಕ ಬಿಡ್ ನಮೂನೆ)**

ರವರಿಗೆ, ದಿನಾಂಕ:
ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ.

ಮಾನ್ಯರೆ,

**ವಿಷಯ:** ಕೆಜಿಟಿಟಿಐ ಕಲಬುರಗಿ ಕೇಂದ್ರಕ್ಕೆ ವಾಚ್ ಮ್ಯಾನ್, ಹೌಸ್ ಕೀಪಿಂಗ್ , ವಾಹನ ಚಾಲಕ, ಹಾಸ್ಟೆಲ್ ವಾರ್ಡನ್ ಮತ್ತು ಹಾಸ್ಟೆಲ್ ಅಟೆಂಡರ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಮಾನವ ಸಂಪನ್ಮೂಲ ಹೊರಗುತ್ತಿಗೆ ಸೇವಾದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿರುವ ಬಗ್ಗೆ.

**ಉಲ್ಲೇಖ:** ಟೆಂಡರ್ ಅಧಿಸೂಚನೆ ಸಂಖ್ಯೆ: _________ ದಿನಾಂಕ:________.

**<u>ಟೆಂಡರ್ ನಮೂನೆ (ತಾಂತ್ರಿಕ ಬಿಡ್) Technical bid Format</u>**

| | | |
|---|---|---|
| 1 | ಟೆಂಡರ್ ಸಂಖ್ಯೆ ಹಾಗೂ ದಿನಾಂಕ | |
| 2 | ಗುತ್ತಿಗೆದಾರರ ಹೆಸರು ಮತ್ತು ಸಂಸ್ಥೆಯ ಪೂರ್ಣ ವಿಳಾಸ ಸಲ್ಲಿಸುವುದು. (ನಮೂನೆ-3 ಅನ್ನು ಸಲ್ಲಿಸುವುದು) | |
| 3 | ಟೆಂಡರ್‌ದಾರರು ವ್ಯಕ್ತಿಯೇ ಅಥವಾ ಸಂಸ್ಥೆಯೇ ಸಂಸ್ಥೆಯಾಗಿದ್ದಲ್ಲಿ ನೋಂದಣಿ ವಿವರಗಳು ಹಾಗೂ ಅದರ ಪ್ರತಿಗಳನ್ನು ಲಗತ್ತಿಸಬೇಕು. | |
| 4 | ದೂರವಾಣಿ ಸಂಖ್ಯೆ ಹಾಗೂ ವಿಳಾಸ | ಕಛೇರಿ:<br>ಮನೆ: |
| 5 | ಟೆಂಡರ್ ಫೀ ವಿವರಗಳು | |
| 6 | ಇ.ಎಂ.ಡಿ. ವಿವರಗಳು | |
| 7 | ಸಂಸ್ಥೆ ಆರಂಭವಾದ ವರ್ಷ, ಹಾಗು ಎಷ್ಟು ವರ್ಷಗಳಿಂದ ಗುತ್ತಿಗೆದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ | |
| 8 | ಪ್ರಸ್ತುತ ಹೊರಗುತ್ತಿಗೆ ಸೇವೆ ಒದಗಿಸುತ್ತಿರುವ ಸಂಸ್ಥೆಗಳ ಸಂಖ್ಯೆ | |
| 9 | ಪ್ರಸ್ತುತ ಸೇವೆ ಒದಗಿಸುತ್ತಿರುವ ಗುತ್ತಿಗೆದಾರರ ಸಿಬ್ಬಂದಿ ಸಂಖ್ಯೆ | |
| 10 | ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. ಸಂಸ್ಥೆ/ ಕಂಪೆನಿ/ಏಜೆನ್ಸಿಯು ಕಳೆದ 3 ವರ್ಷಗಳಲ್ಲಿ ಪ್ರತಿ ತಿಂಗಳು (2022-23, 2023-24 ಮತ್ತು 2024- | |

| | | |
|---|---|---|
| | 25 ಆರ್ಥಿಕ ವರ್ಷಗಳಲ್ಲಿ) ಕಾರ್ಮಿಕ ಭವಿಷ್ಯ ನಿಧಿ(ಇ.ಪಿ.ಎಫ್) ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು. | |
| 11 | ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆಯಡಿ ಕಡ್ಡಾಯವಾಗಿ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು. (2022-23, 2023-24 ಮತ್ತು 2024-25 ಆರ್ಥಿಕ ವರ್ಷಗಳಲ್ಲಿ) ಪ್ರತಿ ತಿಂಗಳು ರಾಜ್ಯ ಕಾರ್ಮಿಕ ವಿಮೆ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು. | |
| 12 | ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿ ಕಡ್ಡಾಯವಾಗಿ ನೋಂದಣಿ ಪ್ರಮಾಣ ಪತ್ರ ಹಾಗೂ 2022-23, 2023-24 ಮತ್ತು 2024-25 ರ ವರೆಗಿನ ಎಸ್.ಟಿ-3 ರಿಟರ್ನ್ ಮತ್ತು ಜಿಎಸ್‌ಟಿ-ಆರ್-3ಬಿ ರಿಟರ್ನ್ ಫೈಲ್ ಮಾಡಿರುವ ದಾಖಲೆಗಳನ್ನು ಲಗತ್ತಿಸುವುದು. | |
| 13 | ವೃತ್ತಿ ತೆರಿಗೆ ನೋಂದಣಿ ಕಾಯ್ದೆಯಡಿ ನೊಂದಣಿ ಪ್ರಮಾಣ ಪತ್ರ ಏಪ್ರಿಲ್-2022 ರಿಂದ ಮಾರ್ಚ್-2023 ನೇ ಸಾಲಿನಲ್ಲಿ ವೃತ್ತಿ ತೆರಿಗೆಯನ್ನು ಭರ್ತಿ ಮಾಡಿರುವ ಬಗ್ಗೆ ಫಾರಂ-5ಎ ರಲ್ಲಿ ರಿಟರ್ನ್ ಫೈಲ್ ಮಾಡಿರುವ ಪ್ರತಿಗಳನ್ನು ಲಗತ್ತಿಸಿರಬೇಕು | |
| 14 | 2022-23, 2023-24 ಮತ್ತು 2024-25 ನೇ ಆರ್ಥಿಕ ವರ್ಷಗಳಿಗೆ 3ಸಂಬಂಧಿಸಿದಂತೆ ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿದ ಸಂಬಂಧ ಪ್ರತಿ ವರ್ಷದ ವಾರ್ಷಿಕ ಆದಾಯ Annual Turnover ರೂ. 30.00 ಲಕ್ಷಗಳ (ಮೂವತ್ತು ಲಕ್ಷಗಳು ಮಾತ್ರ) ಸೇವಾ ದರ ಒಳಗೊಂಡಂತೆ ವಹಿವಾಟು ಮಾಡಿರುವ ಬಗ್ಗೆ ಶಾಸನ ಬದ್ದ ಆಡಿಟ್ ವರದಿ ಪ್ರತಿಗಳನ್ನು ಲಗತ್ತಿಸಬೇಕು. | |
| 15 | 01/04/2019 ರಿಂದ 31/03/2025 ದಿನಾಂಕದವರೆಗೆ ಚುನಾಯಿತ ಸದಸ್ಯರು, ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್ ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೂ ಕಪ್ಪು ಪಟ್ಟಿಯಲ್ಲಿ ಸೇರಿರದೇ ಇರುವ ಬಗ್ಗೆ ಹಾಗೂ ಚುನಾಯಿತ ಸದಸ್ಯರಲ್ಲದೇ ಇರುವ ಬಗ್ಗೆ ನೋಟರಿಯವರಿಂದ ದೃಢೀಕರಿಸಿದ ಪ್ರತಿ ಸಲ್ಲಿಸುವುದು | |
| 16 | 2022, 2023 ಮತ್ತು 2024 ನೇ ಸಾಲಿನ ಡಿಸೆಂಬರ್-31 ಕ್ಕೆ ಅಂತ್ಯವಾಗುವ ವರ್ಷಗಳ ಸಂಬಂಧ ಕಾರ್ಮಿಕ ಕಲ್ಯಾಣ ನಿಧಿಯನ್ನು ಭರಿಸಿರುವ ಕುರಿತು ದಾಖಲೆಗಳನ್ನು ಲಗತ್ತಿಸುವುದು | |

| | | |
|---|---|---|
| 17 | ಟೆಂಡರ್‌ದಾರರ ಬ್ಯಾಂಕ್ ಖಾತೆಗೆ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಬೇಕು. | |
| 18 | ಆಡಳಿತ ಕಛೇರಿಯು ಕರ್ನಾಟಕದಲ್ಲಿರಬೇಕು | |
| 19 | ಟೆಂಡರ್‌ದಾರರು ಪ್ರತಿ ವರ್ಷವು Annual Turnover ರೂ. 30.00 ಲಕ್ಷಗಳು ಆಗಿರಬೇಕು ಸರಾಸರಿ ಮೊತ್ತವನ್ನು ಅಂಗೀಕರಿಸಲಾಗುವುದಿಲ್ಲ. | |

ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ನೋಟರಿಯಿಂದ/ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅದರ ಪ್ರತಿಗಳನ್ನು ಸಲ್ಲಿಸಬೇಕು. ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಿ ಮೇಲಿನ ಮಾಹಿತಿ ನೀಡಿದ್ದು ಎಲ್ಲಾ ಮಾಹಿತಿಯು ಸರಿ ಇದೆ ಎಂದು ದೃಢೀಕರಿಸಿದೆ.

ದಿನಾಂಕ:

ಸ್ಥಳ: ಟೆಂಡರ್‌ದಾರರ ಹೆಸರು, ಸಹಿ ಮತ್ತು ಮೊಹರು

**<u>ಸೂಚನೆ:</u>** ಮೇಲ್ಕಂಡ ಎಲ್ಲಾ ಕಾರ್ಯ್ವಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ಹಾಗೂ ಇತರ ಎಲ್ಲಾ ದಾಖಲೆ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ/ನೋಟರಿಯಿAದ ದೃಢೀಕರಿಸಿ ನಿರ್ದೇಶಕರು, ಕಲಬುರಗಿ ಕೆಜಿಟಿಟಿಐ ಕೇಂದ್ರಕ್ಕೆ ಸಲ್ಲಿಸಬೇಕು.

## ನಮೂನೆ-3

## ಸಂಸ್ಥೆಯ ವಿವರ (Details of the firm)

| | | | |
|---|---|---|---|
| 1 | ಹೆಸರು | : | |
| 2 | ಕಛೇರಿ ವಿಳಾಸ | : | |
| 3 | ಸ್ಥಾಪನೆಯ ದಿನಾಂಕ | : | |
| 4 | ಸಂಸ್ಥೆಯ ಸಂಕ್ಷಿಪ್ತ ವಿವರ | : | |
| 5 | ಅಧಿಕೃತ ಸಹಿ ಮಾಡುವವರ ವಿವರ | : | |
| | i. ಹೆಸರು | : | |
| | ii. ಪದನಾಮ | : | |
| | iii. ಸಂಸ್ಥೆಯ ಹೆಸರು | : | |
| | iv. ವಿಳಾಸ | : | |
| | v. ದೂರವಾಣಿ ಸಂಖ್ಯೆ | : | |
| | vi. ಮೊಬೈಲ್ ಸಂಖ್ಯೆ | : | |
| | vii. ಫ್ಯಾಕ್ಸ್ ಸಂಖ್ಯೆ | : | |
| | viii. ಇ-ಮೇಲ್ ವಿಳಾಸ | : | |
| 6 | ಪವರ್ ಆಫ್ ಅಟಾರ್ನಿ ಹೊಂದಿದ ವ್ಯಕ್ತಿಯ ವಿವರ | : | |
| | i. ಹೆಸರು | : | |
| | ii. ಪದನಾಮ | : | |
| | iii. ಸಂಸ್ಥೆಯ ಹೆಸರು | : | |
| | iv. ವಿಳಾಸ | : | |
| | v. ದೂರವಾಣಿ ಸಂಖ್ಯೆ | : | |
| | vi. ಮೊಬೈಲ್ ಸಂಖ್ಯೆ | : | |
| | vii. ಫ್ಯಾಕ್ಸ್ ಸಂಖ್ಯೆ | : | |
| | viii. ಇ-ಮೇಲ್ ವಿಳಾಸ | : | |
| 7 | ಟೆಂಡರ್‌ದಾರರು ರಾಜ್ಯದ ಇತರೆ ಭಾಗಗಳಲ್ಲಿ ಹೊಂದಿರುವ ಕಛೇರಿಗಳ ವಿವರಗಳು (ದೂರವಾಣಿ ಹಾಗೂ ಇ-ಮೇಲ್ ವಿಳಾಸಗಳೊಂದಿಗೆ) | : | |

ದಿನಾಂಕ: ಟೆಂಡರ್‌ದಾರರ ಸಹಿ
ಸ್ಥಳ: ಮತ್ತು ಮೊಹರು.

**ಅನುಬಂಧ-1**

# ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ)
# ಕಲಬುರಗಿ

**ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಹತ್ತಿರ, ಬಿಇಒ ಕಚೇರಿ ಹಿಂಭಾಗ, ರಾಜಾಪುರ ರಸ್ತೆ, ಕಲಬುರಗಿ - 585 102**

## ಅನುಭವದ ವಿವರಗಳು ನಮೂನೆ
## ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಒದಗಿಸಿದಲ್ಲಿ ವಿವರ

| ಕ್ರ.ಸಂ. | ಸೇವೆ ಪಡೆದಿರುವ ಇಲಾಖೆ/ಸಂಸ್ಥೆಯ ಹೆಸರು ವಿಳಾಸ ದೂರವಾಣಿ ಸಂಖ್ಯೆ | ಅವಧಿ (ವರ್ಷಗಳಲ್ಲಿ) | ಅವಧಿ (ದಿನಾಂಕ—ರಿಂದ – ವರೆಗೆ) | ಸೇವೆಯ ವ್ಯಾಪ್ತಿ | ನಿರ್ವಹಿಸಿದ ಕಾರ್ಯ | ಸೇವೆಗೆ ಪಡೆದಿರುವ ಒಟ್ಟು ಬಿಲ್ಲಿನ ಮೊತ್ತ | ಒದಗಿಸಿರುವ ಮಾನವ ಸಂಪನ್ಮೂಲ (ಸಂಖ್ಯೆಗಳಲ್ಲಿ) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

**ಷರಾ:** ಮೇಲ್ಕಾಣಿಸಿದ ವಿವರಗಳಿಗೆ ಪೂರಕವಾಗಿ ಕೆಳಗಿನವುಗಳನ್ನು ಕಡ್ಡಾಯ ಆಗಿ ನೀಡಬೇಕು.

1) ಸಂಬಂಧಿಸಿದ ಮುಖ್ಯಸ್ಥರಿಂದ ಕಾರ್ಯದೇಶದ/ಯೋಜನೆಯ ವ್ಯಾಪ್ತಿ, ವೆಚ್ಚ, ದಿನಾಂಕ ಹಾಗೂ ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.

2) ಶಾಸನ ಬದ್ದ ಲೆಕ್ಕ ಪರಿಸೋಧಕರಿಂದ ಸಂಸ್ಥೆಯು ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಿಗೆ ಒದಗಿಸಿರುವ ಸೇವೆಗೆ ಸಂಬಂಧಿಸಿದಂತೆ ಸೇವೆಯ ವ್ಯಾಪ್ತಿ, ವೆಚ್ಚ ಹಾಗೂ ಪೂರ್ಣಗೊಂಡ ದಿನಾಂಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.

ದಿನಾಂಕ: ಟೆಂಡರ್‌ದಾರರ ಸಹಿ, ಹೆಸರು

ಸ್ಥಳ: ಮತ್ತು ಮೊಹರು.

**ಅನುಬಂಧ-2**

**ಶಾಸನಬದ್ಧ ಲೆಕ್ಕ ಪರಿಶೋಧಕ ಪ್ರಮಾಣಪತ್ರ**

ದಿನಾಂಕ:

ನಾವು ____________________ ಹೆಸರಿನ ಸಂಸ್ಥೆಯ ಸೂಕ್ತವಾದ ಶಾಸನ ಬದ್ಧ ಮತ್ತು ಇತರ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಮತ್ತು ಸದರಿ ಸಂಸ್ಥೆಯನ್ನು ಕೆಜಿಟಿಟಿಐ ಸಂಸ್ಥೆಗಳ ________________ ಸೇವೆ/ಯೋಜನೆಯ ಉದ್ದೇಶಕ್ಕಾಗಿ ನೇಮಿಸಲಾಗಿದೆ ಎಂಬುದನ್ನು ಪ್ರಮಾಣೀಕರಿಸಲಾಗಿದೆ.

ನಾವು ಸದರಿ ಪ್ರಾಜೆಕ್ಟ್/ಸೇವೆ/ಕಾಂಟ್ರಾಕ್ಟ್‌ಗೆ ಸಂಬAಧಿಸಿದ ಪೂರಕ ದಾಖಲೆಗಳನ್ನು ಪರಿಶೀಲಿಸಿದ್ದೇವೆ ಹಾಗೂ ಕೆಳಗಿನ ಮಾಹಿತಿಯನ್ನು ಪ್ರಮಾಣೀಕರಿಸುತ್ತೇನೆ.

| **ಕಾಂಟ್ರಾಕ್ಟ್/ಪ್ರಾಜೆಕ್ಟ್/ಸೇವೆ ಪ್ರಾರಂಭಿಸಿದ ದಿನಾಂಕ** | **ಕಾಟ್ರಾಕ್ಟ್/ಪ್ರಾಜೆಕ್ಟ್/ಸೇವೆ ಪೂರ್ಣಗೊಂಡ ದಿನಾಂಕ** | **ಸದರಿ ಕಾಂಟ್ರಾಕ್ಟ್/ಪ್ರಾಜೆಕ್ಟ್/ಸೇವೆಯ ಬಿಲ್ಲಿನ ಮೊತ್ತ (ರೂ. ಕೋಟಿಗಳಲ್ಲಿ)** |
|---|---|---|
| | | |
| | | |
| | | |
| | | |
| | | |

ಸಹಿ/ಸೀಲು

ಶಾಸನಬದ್ಧ ಲೆಕ್ಕ ಪರಿಶೋಧಕರ ನೋಂದಣಿ ಸಂಖ್ಯೆ

**ಸೂಚನೆ**: ಸದರಿ ಪ್ರಮಾಣ ಪತ್ರವನ್ನು ಕಳೆದ 3 ವರ್ಷಗಳ ಒಳಗಿನ ಪ್ರಮುಖ ಇಲಾಖೆಗಳ/ಯೋಜನೆಯಡಿ ಪ್ರಾಜೆಕ್ಟ್ /ಸೇವೆ/ಗುತ್ತಿಗೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನೀಡಬೇಕು.

# ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ)
# ಕಲಬುರಗಿ

**ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಹತ್ತಿರ, ಬಿಇಒ ಕಚೇರಿ ಹಿಂಭಾಗ, ರಾಜಾಪುರ ರಸ್ತೆ, ಕಲಬುರಗಿ - 585 102**


## ಅನುಬಂಧ-3

FINANCIAL BID

STATEMENT SHOWING THE POSITION AND RATES FOR PROVIDING MAN POWER SERVICES TO KGTTI-KALABURAGI

| SL.NO | DESIGNATION | Earning | | | Deduction | | | | Benefits | | | | TOTAL (12*13) | SERVICE CHARGE | GST | GRAND TOTAL |
|---|---|---|---|---|---|---|---|---|---|---|---|---|---|---|---|---|
| | | BASIC+VDA | STATUTORY BONUS | TOTAL GROSS (RS) | EMPLOYEE PF @ 12% - ON BASIC+VDA | EMPLOYEE ESI @ 0.75% - ON GROSS SALARY | PROFESSIONAL TAX | NET TAKE HOME SALARY | II. EMPLOYER PF @ 13% - ON BASIC+VDA | III. EMPLOYER ESI @3.25% ON GROSS SALARY | SALARY CTC IN INR (EARNINGS+BENEFITS) | NO OF EMPLOYEES | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1 | HOUSEKEEPER | 15150 | 1262 | 16412 | 1818 | 123 | | 14471 | 1970 | 533 | 18915 | 5 | 94574 | | | |
| 2 | WATCHMAN | 15150 | 1262 | 16412 | 1818 | 123 | | 14471 | 1970 | 533 | 18915 | 3 | 56745 | | | |
| 3 | DRIVERS | 16253 | 1354 | 17607 | 1950 | 132 | | 15525 | 2113 | 572 | 20292 | 1 | 20292 | | | |
| 4 | HOSTEL WARDEN | 18811 | 1567 | 20378 | 2257 | 153 | | 17968 | 2445 | 662 | 23486 | 1 | 23486 | | | |
| 5 | HOSTEL ATTENDER | 15878 | 1323 | 17201 | 1905 | 129 | | 15167 | 2064 | 559 | 19824 | 1 | 19824 | | | |
| **TOTAL** | | **81242** | **6767** | **88009** | **9748** | **660** | | **77601** | **10561** | | **101431** | **11** | **214921** | | | |

| | |
|---|---|
| **NOTE:** | MINIMUM WAGES RATE FOR THE YEAR 2025-26 UNDER BELOW HAEDS |
| | S NO.41 EMPLOYMENT IN HOSTEL (HOSTEL WARDEN/ HOSTEL ATTENDER) |
| | S NO.68 EMPLOYMENT IN SHOPS AND COMMERCIAL ESTABLISHMENT ( HOUSEKEEPER,WATCHMAN & DRIVERS) |

**Sign & Seal of the Service Provider**

## ಅನುಬಂಧ -4

## ಕೆಜಿಟಿಟಿಐ ಕಲಬುರಗಿ ವತಿಯಿಂದ ಜಾಬ್ ರೋಲ್ ಗಳನ್ನು ಲಗತ್ತಿಸಿ ಪ್ರಕಟಿಸಬೇಕು

| SL NO | DESIGNATION | JOB ROLE |
|---|---|---|
| 1 | HOUSEKEEPER | **Roles & Responsibilities:**<br>• Perform a variety of cleaning activities such as sweeping, mopping, dusting etc,.<br>• Ensure proper housekeeping in all rooms, toilets, labs, workshops, canteen, hostel<br>• Protect equipment and make sure there are no inadequacies<br>• Notify superiors on any damages, deficits and disturbances<br>• Check stocking levels of all housekeeping consumables and intimate higher authorities<br>• Adhere strictly to rules regarding health and safety policy of the institute.<br>• Carry out other assigned work |
| 2 | WATCHMAN | **Roles & Responsibilities:**<br>• Inspect and patrol premises regularly<br>• Report any suspicious behaviours and happenings<br>• Secure all exits, doors and windows<br>• Check and monitor authorised inward and outward movement of material<br>• Monitor surveillance cameras<br>• Respond to emergency and react in a timely manner<br>• Provide assistance to people in need<br>• Monitor Safety and Health protocols of the institute<br>**Age :**<br>Not more than 50 years |
| 3 | DRIVERS | **Roles & Responsibilities of Driver:** |

| | | |
|---|---|---|
| | | • Should have Valid Driving Licence to drive LMV.<br>• Should have proven experience as driver<br>• Should have clean driving record<br>• Should maintain the vehicle in good condition ensuring proper upkeep and maintenance<br>• Should be willing to do discharge duty at headquarters and at other places as and when there is requirement<br>• During lean hours the incumbent should be willing to do office work assigned<br>**Qualification**<br>10th standard<br>**Age :**<br>Not more than 40 years |
| 4 | HOSTEL WARDEN | **Roles and Responsibilities:**<br>• Room Allotment to The New Inducted students.<br>• Should reside in the hostel / premises of the institute 24x7 and manage Overall Hostel Maintenance Responsibilities.<br>• Ensure Proper upkeep and maintenance of Hostel.<br>• Take attendance of students everyday<br>• Make sure quality food is served to the hostel students in time by Food supplier<br>• Liaison with food supplier for availing requisite food as per the number of students in the hostel<br>• Ensure proper maintenance of documents pertaining to food consumption by hostel inmates.<br>• Ensure Daily Schedule Adherence by students and enforce strict discipline<br>• Communicate to the Manager / Director in case of any indiscipline or misbehaviour by the students.<br>• Responsible to settle grievances/complaints of the students.<br>• To be incident controller in times of emergency incidents in Hostel<br>• Administer First aid in case of any medical emergency and arrange for hospitalization of student.<br>• Ensure resources like electricity; the inmates of the hostel judiciously use water. |

| | | |
|---|---|---|
| | | • Coordinate with Asst. Wardens of long term, short term and caretaker of ladies' hostel for implementation of all hostel rules and regulations by the students.<br>**Qualification**<br>1. Any Graduate with Degree in Education is preferred<br>2. Ex – Defence personnel is preferred.<br>**Age limit:**<br>Not more than 50 years |
| 5 | HOSTEL ATTENDER | **Role & Responsibilities:**<br>• Roles and responsibilities of girl's hostel Care taker:<br>• Should reside in the lady's hostel / premises of the institute 24x7 and ensure Proper upkeep and maintenance of Girls Hostel.<br>• Take attendance of students everyday<br>• Ensure proper maintenance of documents pertaining to food consumption by hostel inmates.<br>• Ensure Daily Schedule Adherence by students and enforce discipline<br>• Communicate to the Administration in case of any indiscipline or misbehaviour by the students.<br>• Administer First aid in case of any medical emergency and arrange for hospitalization of student.<br>• To assist in office related work assigned<br>**Qualification**<br>$10^{th}$ standard<br>**Age :**<br>Not more than 50 years |

ನಿರ್ದೇಶಕರು,
ಕೆಜಿಟಿಟಿಐ ಕಲಬುರಗಿ